ಸರಕಾರ ಏನಾದರೂ ಪರಿಹಾರ ಕ್ರಮ ಕೈಗೆ ತೆಗೆದುಕೊಳ್ಳಬೇಕೆಂದು ಗಲಾಟೆ ಮಾಡತೊಡಗಿದೆವು. ಪತ್ರಿಕೆಗಳ ಸಂಪಾದಕರಿಗೆ ಪತ್ರದಿಂದ ತೊಡಗಿ, ಟೌನ್‌ಹಾಲ್‌ನ ಎದುರು ಧರಣಿ ಮಾಡುವ ತನಕ ಚಳವಳಿ ಆರಂಭವಾದಾಗ ಸರಕಾರ ಎಲ್ಲ ಶಾಲೆಗಳನ್ನೂ, ಮಾಲ್‌ಗಳನ್ನೂ, ರಸ್ತೆ ಬದಿಯ ತಿಂಡಿಕಟ್ಟೆಗಳನ್ನು ಮುಚ್ಚಲು ಆಜ್ಞೆ ಹೊರಡಿಸಿತಲ್ಲದೇ ಕೆಮ್ಮಿದ ತಕ್ಷಣ ಹತ್ತಿರದ ಡಾಕ್ಟರರನ್ನು ಸಮಾಲೋಚಿಸಿ ಎಂದು ಸಲಹೆ ಮಾಡಿತು. ಜನರಿಗೆ ಅವರ ಸಲಹೆಯಿಂದ ತೃಪ್ತಿಯಾಗದೇ ಇದ್ದಾಗ ಸರಕಾರ ಈ ನಿಗೂಢ ರೋಗ ಚೈನಾದಿಂದ ಹಬ್ಬಿದ್ದೆಂದೂ ಇದರ ನಿವಾರಣೆಗೆ ವಿದೇಶಗಳಲ್ಲಿ ನುರಿತ ಹಲವು ವಿಜ್ಞಾನಿಗಳು ಔಷಧಿಯನ್ನು ಹುಡುಕುವ ಕೆಲಸದಲ್ಲಿ ಹಗಲು ರಾತ್ರಿ ನಿರತರಾಗಿದ್ದಾರೆಂದೂ, ಬಹುಬೇಗ ಅಂಗಡಿಗಳಲ್ಲಿ ಅದು ಲಭ್ಯವಾಗಬಹುದೆಂದೂ ಆಶ್ವಾಸನೆಯಿತ್ತಿತು.

ನಾವೆಲ್ಲ ಡಾಕ್ಟರರ ಬಳಿ ಧಾವಿಸಿದೆವು. ಪರೀಕ್ಷಾ ಕೊಠಡಿಯ ಎದುರಿನ ಪ್ರತೀಕ್ಷಾ ಕಕ್ಷದಲ್ಲಿ ಸಾಕಷ್ಟು ಕುರ್ಚಿಗಳನ್ನು ಹಾಕಿದ್ದರೂ ಅವುಗಳ ಮೇಲೆ ಜನರು ಕೂತಿದ್ದು ಕಕ್ಷ ಈಗಾಗಲೇ ತುಂಬಿ ಹೋಗಿತ್ತು. ಕೂರಲು ಕುರ್ಚಿಗಳಿಲ್ಲದೆ ಕೂತವರಿಗಿಂತ ಹೆಚ್ಚಿನ ಮಂದಿ ನಿಂತುಕೊಂಡಿದ್ದರು. ಎಲ್ಲರೂ ಮಾಸ್ಕ್ ಧರಿಸಿದ್ದರು. ಒಬ್ಬರೂ ಮಾತಿಲ್ಲದೆ ಮೌನವಾಗಿ ತಮ್ಮ ಸರದಿಗಾಗಿ ಕಾಯುತ್ತಿದ್ದರು. ಪಕ್ಕದಲ್ಲಿದ್ದವನು ಕೆಮ್ಮಿದ ತಕ್ಷಣ ಸರದಿಯನ್ನೂ ಲೆಕ್ಕಿಸದೆ ಅವನನ್ನು ಡಾಕ್ಟರರ ಬಳಿ ಕಳುಹಿಸುತ್ತಿದ್ದುದು ಉದಾರತೆಯಿಂದಲ್ಲ, ಬದಲಾಗಿ ಆರು ಅಡಿಗಳ ಅಂತರ ಕಾಯಬೇಕು ಎನ್ನುವ ಸರಕಾರದ ಸಲಹೆ ಅನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರವೇ ಆದರೂ ಯಾರೂ ಬಾಯಿ ತೆರೆಯಲಿಲ್ಲ. ಉಳಿದ ದಿನಗಳಲ್ಲಾಗಿದ್ದರೆ ಸರದಿ ತಪ್ಪಿಸುವವನ ಜೊತೆ ನಾವು ಜಗಳಕ್ಕೇ ನಿಲ್ಲುತ್ತಿದ್ದೆವು. ಎಲ್ಲರ ಮನಸ್ಸಿನಲ್ಲಿ ಯಾರಾದರೊಬ್ಬರು ಸತ್ತು, ಅವನ ದೇಹವನ್ನು ಪ್ರಯೋಗಾಲಯಕ್ಕೆ ಕಳುಹಿಸಿ, ತಪಾಸಣೆ ಮಾಡಿ, ಈ ಮಾರಕ ರೋಗಕ್ಕೆ ಆದಷ್ಟು ಬೇಗ ಔಷಧ ಕಂಡು ಹುಡುಕಿದರೆ ಆದೀತು ಎಂಬ ಆಶಯವಿದ್ದಿತು.



ಸ್ವತಃ ನಿಶ್ಶಕ್ತಿಯಿಂದ ಬಳಲುತ್ತಿದ್ದರೂ ಡಾಕ್ಟರರು ಆತಂಕದಿಂದ ಬಳಲುತ್ತಿದ್ದ ರೋಗಿಯನ್ನು ಪರೀಕ್ಷೆ ಮಾಡಿ “ಯೋಚಿಸುವ ಅಗತ್ಯವಿಲ್ಲ, ಎಲ್ಲವೂ ಬೇಗ ಸರಿ ಹೋಗುತ್ತದೆ, ಸೆಖೆ ಜಾಸ್ತಿಯಾದ ಹಾಗೆ ರೋಗಾಣುಗಳೆಲ್ಲ ಸತ್ತು ಹೋಗುತ್ತವೆ, ನೀವು ಸರಿಯಾದ ಪಥ್ಯದಲ್ಲಿರಿ, ಗುಣವಾಗುತ್ತೀರಿ” ಅಂತ ಭರವಸೆ ಕೊಟ್ಟಾಗ ರೋಗಿಯ ಮುಖದ ಮೇಲೆ ಮತ್ತೆ ಮುಗುಳ್ನಗೆ ಮೂಡುತ್ತಿತ್ತು. ಆದರೆ ಆಸ್ಪತ್ರೆಯಿಂದ ಹೊರಗೆ ಬಿದ್ದಾಗ ರಸ್ತೆಯ ತುಂಬ ಜೋಲು ಬಿದ್ದ ರೋಗಿಷ್ಠ ಮುಖಗಳನ್ನು ನೋಡಿದೊಡನೆ ಅವನ ಮುಖವೂ ಹಿಂದಿನ ಸ್ಥಿತಿಗೇ ಮರಳುತ್ತಿತ್ತು. ಪ್ರತಿದಿನ ಹೀಗೆ ಆಸ್ಪತ್ರೆಗೆ ಅಲೆದಾಡುವುದನ್ನು ಯಾರಿಂದಲೂ ತಪ್ಪಿಸಲಾಗಲಿಲ್ಲ.

ದಿನಗಳು ಕಳೆದಂತೆ ನಮ್ಮ ನೈತಿಕ ಬಲ ಕುಸಿಯಲಾರಂಭಿಸಿತು. ನಿಗೂಢವಾದ ರೋಗ